# ಲಿಪಿ ತಂತ್ರ

ಭಾರತೀಯ ಪ್ರಾಚೀನ ಲಿಪಿಗಳ ಬಗೆಗೆ ಸ್ವಲ್ಪ ತಿಳಿಯೋಣ. ನಾವು ಇಂದು ಬಳಸುತ್ತಿರುವ 'ಕನ್ನಡಲಿಪಿ'ಯು ಇದ್ದಕ್ಕಿದ್ದಂತೆ ರೂಪುಗೊಂಡಿದ್ದಲ್ಲ. ಈ ಲಿಪಿಗೂ ಸಹಸ್ರಾರು ವರ್ಷಗಳ ಚರಿತ್ರೆ ಉಂಟು. ಭಾರತದ ಪ್ರಾಚೀನ ಲಿಪಿ 'ಬ್ರಾಹ್ಮೀ' ಎಂಬುದು ಈಗ ವಿದ್ವಾಂಸರು ಒಪ್ಪಿಕೊಂಡಿರುವ ವಿಚಾರ. ಕನ್ನಡ ಲಿಪಿಯು 'ಬ್ರಾಹ್ಮಿಲಿಪಿ'ಯಿಂದ ರೂಪಾಂತರಗೊಂಡಿದೆ. ಅದರಂತೆಯೇ ಗುಪ್ತ, ಕುಟಿಲ, ನಾಗರಿ, ಶಾರದಾ, ಬಂಗಾಳ, ತೆಲುಗು, ತಮಿಳು, ಗ್ರಂಥ, ತುಳು ಮತ್ತು ಮಲೆಯಾಳಂ ಲಿಪಿಗಳು ಆಯಾಯ ಪ್ರದೇಶಗಳಲ್ಲಿ ಬಳಕೆಗೊಂಡಿವೆ. ಪ್ರಾದೇಶಿಕ ಚರಿತ್ರೆಗಳನ್ನು ತಿಳಿಯಲು ಲಿಪಿಗಳು ಪರೋಕ್ಷವಾಗಿ ಕಾರಣವಾಗುತ್ತವೆ. ಅಶೋಕನ ಬಹುತೇಕ ಶಾಸನಗಳು ಬ್ರಾಹ್ಮೀಲಿಪಿಯಲ್ಲಿವೆ. ಬ್ರಹ್ಮಗಿರಿಯಲ್ಲಿರುವ ಅಶೋಕನ ಶಾಸನವನ್ನು ಕಂಡರಣೆ ಮಾಡಿದವನು ಚಪಡ. ಇವನು ಗಾಂಧಾರದೇಶಕ್ಕೆ (ಈಗಣ ಆಫ್ಘಾನಿಸ್ತಾನ) ಸೇರಿದವನು. ಅಶೋಕನು ನೀಡಿದ ಪ್ರೋತ್ಸಾಹ ಮತ್ತು ಆಜ್ಞೆಯಿಂದಾಗಿ ಅವನು ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕಿಗೆ ಬರುತ್ತಾನೆ. ಆ ಕಾಲಕ್ಕೆ ಬ್ರಹ್ಮಗಿರಿಯ ಸುತ್ತಮುತ್ತಣ ಪ್ರದೇಶವನ್ನು 'ಇಸಿಲ' ಎಂದು ಕರೆಯುತ್ತಿದ್ದರು. ಇದು ಕ್ರಿ.ಪೂ. 3ನೆಯ ಶತಮಾನದ ಕಥನ. ದಕ್ಷಿಣಭಾರತಕ್ಕೆ ಮೊತ್ತಮೊದಲ ಬಾರಿಗೆ ಬ್ರಾಹ್ಮೀಲಿಪಿಯು ಚಪಡನಿಂದ ಬಂದಿತು. ಇದೊಂದು ಕುತೂಹಲಕಾರಿ ಸಂಗತಿ.

ಬೌದ್ಧಸಾಹಿತ್ಯದಲ್ಲಿ 'ಲಲಿತವಿಸ್ತರ' ಎಂಬೊಂದು ಅಪೂರ್ವ ಗ್ರಂಥವಿದೆ. ಅದು ಪುರಾಣಶೈಲಿಯಲ್ಲಿದೆ. ಅದು ಬುದ್ಧನ ಜೀವನವನ್ನು ಚಿತ್ರಿಸುತ್ತದೆ. ಅದೂ ಕೂಡ ಕ್ರಿ.ಪೂ. 2ನೆಯ ಶತಮಾನಕ್ಕೆ ಸೇರಿದ್ದೆಂದು ವಿದ್ವಾಂಸರು ಹೇಳುತ್ತಾರೆ. ಬುದ್ಧನ ಲೀಲೆಗಳನ್ನು ಹೇಳುವ ಅದು ಮಿಶ್ರಸಂಸ್ಕೃತ ಭಾಷೆಯಲ್ಲಿದೆ. ಅದರ ಹತ್ತನೆಯ ಅಧ್ಯಾಯ 'ಲಿಪಿಶಾಲಾ ಸಂದರ್ಶ ಪರಿವರ್ತ' ಎಂದಿದೆ. ಬೋಧಿಸತ್ವ ಬೆಳೆದು ದೊಡ್ಡವನಾಗುತ್ತಾನೆ. ಅವನ ತಂದೆ ಶುದ್ಧೋಧನ ಮಹಾರಾಜ ಲಕ್ಷಾಂತರ ಮಂಗಳವಾದ್ಯಗಳ ಜತೆ ವಿದ್ಯಾಭ್ಯಾಸಕ್ಕಾಗಿ ಲಿಪಿಶಾಲೆಗೆ ಕರೆದುಕೊಂಡು ಬರುತ್ತಾನೆ. ಆ ಸರ್ವಾರ್ಥಸಿದ್ಧನ ಹಿಂದೆ ಹತ್ತುಸಾವಿರ ಬಾಲಕರು ಹೋಗುವರು. ಅವರೆಲ್ಲಾ ನೋಡುತ್ತಿರುವಂತೆ ಬೋಧಿಸತ್ವ ಲಿಪಿಶಾಲೆಯನ್ನು ಪ್ರವೇಶಮಾಡಿದ. ಅವನಿಗೆ ಗುರುವೆಂದು ನಿಮಂತ್ರಿತರಾದ ವಿಶ್ವಾಮಿತ್ರರೆಂಬ ವಿದ್ವಾಂಸನು ಬೋಧಿಸತ್ವನ ಶೋಭೆ ಹಾಗೂ ತೇಜಸ್ಸನ್ನು ನೋಡಿ ಬವಳಿ ಬಂದು ಮೂರ್ಛಿತನಾದರು. ಅನಂತರ ಶುಭಾಂಗನಾದ ದೇವಪುತ್ರನು ಬೋಧಿಸತ್ವನ ಬಗೆಗೆ ಹೀಗೆ ಹೇಳಿದ:

'ಮನುಷ್ಯಲೋಕದಲ್ಲಿ ಎಷ್ಟೆಷ್ಟು ಶಾಸ್ತ್ರಗಳಿವೆಯೋ ಅವುಗಳನ್ನೂ ಸಂಖ್ಯಾಲಿಪಿ, ಧಾತುತಂತ್ರ, ಶಿಲ್ಪ, ಯೋಗ ಮತ್ತು ಎಲ್ಲಾ ಲೌಕಿಕವಿದ್ಯೆಗಳನ್ನೂ ಈ ಬೋಧಿಸತ್ವ ಅನೇಕ ಹಿಂದಣ ಜನ್ಮಗಳಲ್ಲಿ ಚೆನ್ನಾಗಿ ತಿಳಿದುಕೊಂಡಿದ್ದಾನೆ. ಜನ ತನ್ನನ್ನು ಅನುಸರಿಸುವಂತೆ ಮಾಡುವ ಅಭಿಪ್ರಾಯದಿಂದ ಲಿಪಿಶಾಲೆಗೆ ಬಂದಿದ್ದಾನೆ. ಇಲ್ಲಿ ತಕ್ಕ ಶಿಕ್ಷಣ ಹೊಂದಲು ಇವನು ಬಯಸಿದ್ದಾನೆ. ಇವನು ಲೋಕೋತ್ತರಗಳಾದ ನಾಲ್ಕು ಆರ್ಯಸತ್ಯಗಳನ್ನೂ ವಿಧಿಜ್ಞ, ಹೇತು, ಪ್ರತೀತ್ಯ ಕುಶಲಗಳನ್ನೂ ಹೊಂದಿದ್ದಾನೆ. ಇಂಥ ವಿಧಿಜ್ಞನಿಗೆ ಲಿಪಿಶಾಸ್ತ್ರಗಳು ಎಷ್ಟು ಮಾತ್ರ? ಮೂರು ಲೋಕಗಳಲ್ಲೂ ಇವನನ್ನು ಮೀರಿಸುವ ಮತ್ತೊಬ್ಬ ಆಚಾರ್ಯನಿಲ್ಲ. ದೇವ–ಮಾನವರಲ್ಲಿ ಇವನೇ ಜೇಷ್ಠ. ಈತ ಈ ಹಿಂದಿನ ಕೋಟ್ಯಂತರ ಜನ್ಮಗಳಲ್ಲಿ ಅನೇಕ ಲಿಪಿಗಳನ್ನು ಅಭ್ಯಾಸ ಮಾಡಿದ್ದಾನೆ. ಆ ಲಿಪಿಗಳ ಹೆಸರುಗಳನ್ನೂ ನೀವು ಕೇಳಿರುವುದಿಲ್ಲ. ಈ ಬೋಧಿಸತ್ವ ಬಹುದೊಡ್ಡ ಧಾರಣಾಶಕ್ತಿಯುಳ್ಳವನು. ಅದೃಶ್ಯವೂ ರೂಪವಿಲ್ಲದವೂ ಆದ ಪದ್ಧತಿಗಳನ್ನು ಕುರಿತೇಟಿನಂತೆ ಗ್ರಹಿಸಬಲ್ಲ. ಇನ್ನು ಅಕ್ಷರ ದೃಶ್ಯರೂಪವಾಗಿರುವ ಲಿಪಿಯನ್ನು ಕುರಿತು ಬೇರೆ ಹೇಳಬೇಕೆ' – ಹೀಗೆ ನುಡಿದು ದಿವ್ಯಹೂಗಳಿಂದ ಬೋಧಿಸತ್ವವನ್ನು ಪೂಜಿಸಿ ಮಾಯವಾದನು. ಅನಂತರ ಶುದ್ಧೋಧನನು ಸಾಕುತಾಯಿಯರನ್ನೂ ದಾಸೀಜನರನ್ನೂ ಏರ್ಪಾಟು ಮಾಡಿ ಅಲ್ಲಿಂದ ಹೊರಟುಹೋದ.

ಬೋಧಿಸತ್ವನು ಉರಗಸಾರಚಂದನ ಹಚ್ಚಿದ ಹಲಗೆಯನ್ನು ಅನೇಕ ರತ್ನಮಣಿಗಳಿಂದ ಅಲಂಕರಿಸಿದ ಸುವರ್ಣಮಯವಾದ ಬಳಪವನ್ನು ಕೈಗೆ ತೆಗೆದುಕೊಂಡು ಅನಂತರ ಗುರುಗಳಾದ ವಿಶ್ವಾಮಿತ್ರರೊಂದಿಗೆ ಈ ರೀತಿ ಹೇಳಿದ: 'ಉಪಾಧ್ಯಾಯರೇ ತಾವು ನನಗೆ ಯಾವ ಲಿಪಿಯನ್ನು ಹೇಳಿಕೊಡುತ್ತೀರಾ? ಬ್ರಾಹ್ಮೀಲಿಪಿ, ಖರೋಷ್ಠಿಲಿಪಿ, ಪುಷ್ಕರಸಾರಿ, ಅಂಗಲಿಪಿ, ವಂಗಲಿಪಿ, ಮಗಧಲಿಪಿ, ಮಂಗಳ್ಯಲಿಪಿ, ಅಂಗುಳೀಯ ಲಿಪಿ, ಸಕಾರಿಲಿಪಿ, ಬ್ರಹ್ಮಾವಲಿಲಿಪಿ, ಪಾರುಷ್ಯಲಿಪಿ, ದ್ರಾವಿಡಲಿಪಿ, ಕಿರಾತಲಿಪಿ, ದಾಕ್ಷಣ್ಯಲಿಪಿ, ಉಗ್ರಲಿಪಿ, ಸಂಖ್ಯಾಲಿಪಿ, ಅನುಲೋಮಲಿಪಿ, ಅವಮೂರ್ಧಲಿಪಿ, ದರದಲಿಪಿ, ಭಾಷ್ಯಲಿಪಿ, ಚೀನೀಲಿಪಿ, ಲೂನಲಿಪಿ, ಹೂಣಲಿಪಿ, ಮಧ್ಯಾಕ್ಷರ ವಿಸ್ತರಲಿಪಿ, ಪುಷ್ಪಲಿಪಿ, ದೇವಲಿಪಿ, ನಾಗಲಿಪಿ, ಯಕ್ಷಲಿಪಿ, ಗಂಧರ್ವಲಿಪಿ, ಕಿನ್ನರಲಿಪಿ, ಮಹೋರಗಲಿಪಿ, ಅಸುರಲಿಪಿ, ಗರುಡಲಿಪಿ, ಮೃಗಚಕ್ರಲಿಪಿ, ವಾಯಸಲಿಪಿ, ಭೌಮದೇವಲಿಪಿ, ಅಂತರಿಕ್ಷಲಿಪಿ, ಉತ್ತರಕುರುದ್ವೀಪಲಿಪಿ, ಅಪರಗೋಡಾನಿಲಿಪಿ, ಪೂರ್ವವಿದೇಹಲಿಪಿ, ಉತ್‌ಕ್ಷೇಪಲಿಪಿ, ನಿಕ್ಷೇಪಲಿಪಿ, ವಿಕ್ಷೇಪಲಿಪಿ, ಪ್ರಕ್ಷೇಪಲಿಪಿ, ಸಾಗರಲಿಪಿ, ಲೇಖಪ್ರತಿಲೇಖಲಿಪಿ, ಅನುದ್ರುತಲಿಪಿ, ಶಾಸ್ತ್ರಾವರ್ತಲಿಪಿ, ಗಣನಾವರ್ತಲಿಪಿ, ಉತ್‌ಕ್ಷೇಪಾವರ್ತಲಿಪಿ, ಪಾದಲಿಖಿತಲಿಪಿ, ದ್ವಿರುತ್ತರಪದ ಸಂಧಿಲಿಪಿ, ಯಾವದ್ದಶೋತ್ತರಪದ ಸಂಧಿಲಿಪಿ, ಮಧ್ಯಾಹಾರಣೀ ಲಿಪಿ, ಸರ್ವರುತ ಸಂಗ್ರಹಲಿಪಿ, ವಿದ್ಯಾನುಸೋಮಾವಿಮಿಶ್ರಿತಲಿಪಿ, ಋಷಿತಪಸ್ತಪ್ತಲಿಪಿ, ರೋಚಮಾನ ಲಿಪಿ, ಧಾರಣೀಲಿಪಿ, ಪ್ರೇಕ್ಷಣೀಲಿಪಿ, ಗಗನಪ್ರೇಕ್ಷಣೀಲಿಪಿ, ಸರ್ವೌಷಧನಿವ್ಯಂದಲಿಪಿ, ಸರ್ವಸಾರ ಸಂಗ್ರಹಣ ಲಿಪಿ, ಸರ್ವಭೂತರುತ ಗ್ರಾಹಿಣೀಲಿಪಿ ಎಂದು ಇವೆಯಲ್ಲಾ! ಈ ಅರುವತ್ತನಾಲ್ಕು ಲಿಪಿಗಳಲ್ಲಿ ಯಾವ ಲಿಪಿಯನ್ನು ನನಗೆ ನೀವು ಬೋಧಿಸುತ್ತೀರಾ?' ಎಂದನು.

ಇದಿಷ್ಟು ಲಿಪಿಗಳ ಹೆಸರು 'ಲಲಿತವಿಸ್ತರ'ದಲ್ಲಿ ಬಂದಿವೆ. ಅನಂತರ ಬೋಧಿಸತ್ವ ಹತ್ತುಸಾವಿರ ಮಂದಿಕುಮಾರರಿಗೆಲಿಪಿಯನ್ನು ಕಲಿಸಿಕೊಡುತ್ತಾನೆ. ಇಲ್ಲಿ ಬಂದಿರುವ ಅರುವತ್ತನಾಲ್ಕು ಲಿಪಿಗಳಿಗೆ ಸ್ಪಷ್ಟತೆ ಇಲ್ಲ. ಕಳೆದ ಎರಡುಸಾವಿರದ ಇನ್ನೂರು ವರ್ಷಗಳ ಹಿಂದೆ ಇಲ್ಲಿ ಹೆಸರಿಸಿರುವ ಹಲವು ಲಿಪಿಗಳಾದರೂ ಬಳಕೆಯಲ್ಲಿರಬೇಕು. ದೇಶವಾಚಿಗಳಾದ ಲಿಪಿಗಳ ಹೆಸರು ಬಂದಿವೆ. ಯಕ್ಷ, ಗಂಧರ್ವ, ಕಿನ್ನರ ದೇವಸಮೂಹದ ಲಿಪಿಗಳ ಹೆಸರೂ ಇಲ್ಲುಂಟು. ಆ ಕಾಲದಲ್ಲಿ ಬೇರೆಬೇರೆ ಲೌಕಿಕವಿದ್ಯೆಗಳನ್ನು ರಹಸ್ಯವಾಗಿಡುವ ಕಾರಣಗಳಿಂದ ಬಳಕೆಗೊಳ್ಳುತ್ತಿರುವ ಸಂಕೇತರೂಪೀ ಲಿಪಿಪ್ರಪಂಚವೂ ಇಲ್ಲಿದೆ. ಈ ಎಲ್ಲಾ ಲಿಪಿಗಳ ಸ್ವರೂಪ ತಿಳಿಯುವುದು ಕಡುಕಷ್ಟ. ಆದರೆ, ಈ ಎಲ್ಲಾ ಲಿಪಿಗಳಿಗೆ 'ಬ್ರಾಹ್ಮೀಲಿಪಿ'ಯು ಪ್ರಥಮವೆಂದು ನಿಸ್ಸಂಶಯವಾಗಿ ಹೇಳಬಹುದು.

■ ಪುರಂಜೀವಿ

## ಮಾತೇ ಮುತ್ತು

- ಗಾಳಿಗೂಡಿ ಕಿರುಮೋಡವಾಗಿ ಬಾನೆಲ್ಲ ಅಲೆಯುವಾಸೆ!
  ಬಾನದೇಗುಲದಿ ನಮ್ರನಾಗಿ ಮೈದುಂಬಿ ನಿಲ್ಲುವಾಸೆ!

  –ಚೆನ್ನವೀರ ಕಣವಿ

- ತಿಳಿದು ಬದುಕುವುದು ಮನುಷ್ಯ ಧರ್ಮ; ತಿಂದು ಬದುಕುವುದು ಪ್ರಾಣಿ ಧರ್ಮ.

  –ದ.ರಾ. ಬೇಂದ್ರೆ

- ನಿಷ್ಪ್ರಯೋಜಕರು ಕೇವಲ ತಿನ್ನುವುದಕ್ಕಾಗಿ ಮತ್ತು ಕುಡಿಯುವುದಕ್ಕಾಗಿ ಬದುಕುತ್ತಾರೆ. ಪ್ರಯೋಜನಕಾರಿ ವ್ಯಕ್ತಿಗಳು ಬದುಕುವುದಕ್ಕಾಗಿ ತಿನ್ನುತ್ತಾರೆ ಮತ್ತು ಕುಡಿಯುತ್ತಾರೆ.

  –ಸಾಕ್ರೆಟಿಸ್

- ಆತ್ಮವಿಶ್ವಾಸ, ಜಯದ ಮೊದಲ ಗುಟ್ಟು.

  –ಎಮರ್ಸನ್

- ಮನುಷ್ಯನ ಬೆಳವಣಿಗೆಗೆ ಬೇಕಾದ ಸ್ವಾರ್ಥವು ಅವನಲ್ಲಿರಬೇಕು. ಆದರೆ ಮಿತಿ ಮೀರಿದ ಸ್ವಾರ್ಥವಿರಕೂಡದು.

  –ಶಿವರಾಮ ಕಾರಂತ

- ಸ್ವಸಹಾಯದಲ್ಲಿ ನಂಬಿಕೆ ಇರುವವರಿಗೆ ದೇವರು ಸಹಾಯ ಮಾಡುತ್ತಾನೆ.

  –ಬೆಂಜಮಿನ್ ಫ್ರಾಂಕ್ಲಿನ್